# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:, ಸಿ4(5)ವೃ.ಶಿ.ಪರಿ.ಸಭೆ.ಠರಾವು/ಇವಿ/79/2010-11 ದಿನಾಂಕ: 25-02-2011

## ಸುತ್ತೋಲೆ

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೇಡ್-2 ವೃತ್ತಿ ಶಿಕ್ಷಕರಿಗೆ ಗ್ರೇಡ್-1 ಹುದ್ದೆಗೆ ಬಡ್ತಿ ಸ್ಥಳಾಂತರ ಮತ್ತು ಬೇರೆ ವೃಂದದ ಹುದ್ದೆಗಳಿಂದ ಭರ್ತಿ ಮಾಡುವುದರ ಬಗ್ಗೆ.

ಉಲ್ಲೇಖ: ದಿನಾಂಕ::26-07-2010ರಂದು ನಡೆದ ವೃತ್ತಿ ವಿಷಯ ಪರಿವೀಕ್ಷಕರ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿರುವ ಬಗ್ಗೆ.

&&&&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ::26-07-2010ರಂದು ನಡೆದ ವೃತ್ತಿ ವಿಷಯ ಪರಿವೀಕ್ಷಕರ ಸಭೆಯಲ್ಲಿ ವೃತ್ತಿಶಿಕ್ಷಣ ಶಿಕ್ಷಕರ ಬೇಡಿಕೆಗಳನ್ನು ಮಂಡಿಸಿ ಕ್ರಮಕೈಗೊಳ್ಳಲು ಕೋರಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಸೂಚಿಸಿದೆ.

1. ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಗತ್ಯತೆಗನುಗುಣವಾಗಿ ಮಂಜೂರಾಗಿರುವ ವೃತ್ತಿಶಿಕ್ಷಣ ಶಿಕ್ಷಕರ ಹುದ್ದೆಯನ್ನು ಅದೇ ಶಾಲೆಯಲ್ಲಿ ಮುಂದುವರೆಸಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ವೃತ್ತಿಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಯಾವುದೇ ಕಾರಣಕ್ಕೆ ಬೇರೆ ವೃಂದದ ಹುದ್ದೆಗಳನ್ನಾಗಿ ಪರಿವರ್ತಿಸದಿರುಲು ಸೂಚಿಸಿದೆ.
2. ಯಾವುದೇ ಸರ್ಕಾರಿ ಪ್ರೌಢಶಾಲೆಯಲ್ಲಿ ಗ್ರೇಡ್-2 ಮತ್ತು ಗ್ರೇಡ್-1 ವೃತ್ತಿಶಿಕ್ಷಣ ಶಿಕ್ಷಕರ ಹುದ್ದೆಗಳಿದ್ದಲ್ಲಿ ಅಥವಾ ಒಂದಕ್ಕಿಂತ ಹೆಚ್ಚು ಹುದ್ದೆಗಳಿದ್ದಲ್ಲಿ ಒಂದು ಹುದ್ದೆಯನ್ನು ಉಳಿಸಿಕೊಂಡು ಮತ್ತೊಂದು ಹುದ್ದೆಯನ್ನು ಅಗತ್ಯವಿರುವ ಪ್ರೌಢಶಾಲೆಗೆ (ಸ್ಥಳಾಂತರಿಸುವ ಸಂದರ್ಭದಲ್ಲಿ) ಸ್ಥಳಾಂತರಿಸಲು ಕ್ರಮಕೈಗೊಳ್ಳುವುದು.
3. ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಗ್ರೇಡ್-1 ವೃತ್ತಿಶಿಕ್ಷಣ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವ ಬಗ್ಗೆ ಸರ್ಕಾರಿ ಆದೇಶದ ಸಂಖ್ಯೆ: ಇಡಿ 202 ಎಸ್.ಎಲ್.ಬಿ.98 ದಿನಾಂಕ: 20-05-2004 ರಂತೆ ದಿನಾಂಕ: 01-06-2007 ರ ಈ ಕಛೇರಿಯ ಜ್ಞಾಪನದಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಬಡ್ತಿ ನೀಡುವ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲು ಜಿಲ್ಲಾ ಉಪನಿರ್ದೇಶಕರಿಗೆ ಸೂಚಿಸಲಾಗಿತ್ತು. ಈ ಗ್ರೇಡ್-1 ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೃತ್ತಿ ಶಿಕ್ಷಕರು ನಿವೃತ್ತಿ, ಬಡ್ತಿ ಅಥವಾ ಇನ್ನಾವುದೇ ಕಾರಣಗಳಿಂದ ತೆರವಾದಾಗ ಆ ಹುದ್ದೆಗಳನ್ನು ಗ್ರೇಡ್-2 ವೃತ್ತಿ ಶಿಕ್ಷಣ ಶಿಕ್ಷಕರ ಸೇವಾ ಜೇಷ್ಠತೆಯ ಆಧಾರದ ಮೇಲೆ ನಿಯಮಾನುಸಾರ ಬಡ್ತಿ ನೀಡಲು ತಿಳಿಸಿದೆ.

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ:

1. ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು:

1. ಹಿರಿಯ ಸಹಾಯಕ ನಿರ್ದೇಶಕರು (ವೃತ್ತಿ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

\\Typing3server\d\E\EST4\Vocational Teacher..doc